# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5041/2022 ಫ್ರಾಸಾ-08
ಚಾಸಾ-10

ದಿನಾಂಕಃ 18-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಓಬಲೇಶ್ |
| **ತಂದೆಯ ಹೆಸರು** | ಚಂಚಪ್ಪ |
| **ವಯಸ್ಸು** | 35 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ರಾಮಾಪುರ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಮೃತ ಸುದೀಪ ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ಮೃತ ಸುಧೀಪ ಮತ್ತು ಆರೋಪಿತರು ನಮ್ಮ ಊರಿನವರೇ ಆಗಿದ್ದು ಎಲ್ಲರೂ ಸೇರಿ ಕೆಲಸಕ್ಕೆ ಹೋಗುತ್ತಿದ್ದೇವು. ನಾನು ಟ್ರಾಕ್ಟರ್ ಚಾಲನೆ ಮಾಡುತ್ತಿದ್ದೆ. ಈಗ ಸುದೀಪ ಬದುಕಿಲ್ಲ, ಆತ ತೀರಿಕೊಂಡು ಸುಮಾರು 2 ವರ್ಷಗಳ ಮೇಲೆ ಆಗಿರುತ್ತದೆ. ಸುದೀಪ ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆಂದು ಊರಿನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ನಾನು , ಆರೋಪಿತರು ಮತ್ತು ಮೃತ ಸುದೀಪ ಎಲ್ಲರೂ ಸೇರಿಕೊಂಡು ಎಲ್ಲೂ ಹೋಗಿರುವುದಿಲ್ಲ. ಆರೋಪಿತರು ಮೃತನಿಗೆ ಏನು ಮಾಡಿರುತ್ತಾರೆಂದು ಗೊತ್ತಿಲ್ಲ. ಸುದೀಪನನ್ನು ನಾನು ಎರಡು ವರ್ಷಗಳ ಹಿಂದೆ ಆತನು ಒಬ್ಬನೇ ಗಾಡಿ ಓಡಿಸಿಕೊಂಡು ಹೋಗುವಾಗ ನಮ್ಮ ಊರಿನಲ್ಲಿ ನೋಡಿರುತ್ತೇನೆ. ಪೊಲೀಸರಿಗೆ ಮರು ಹೇಳಿಕೆ ಕೊಟ್ಟಿರುವುದಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ನಾನು , ಸುದೀಪ ಮತ್ತು ಆರೋಪಿತರು ಆಗಾಗ ಮೊಲ ಬೇಟೆ ಆಡಲು ಹೋಗುತ್ತಿದ್ದೇವು ಆ ಸಮಯದಲ್ಲಿ ಆರೋಪಿ-2 ಯಾವಾಗ ತನ್ನ ಬಳಿ ಇರುವ ನಾಡ ಬಂದೂಕನ್ನು ಮತ್ತು ಆರೋಪಿ ಚಲಪತಿ ಹಣೆಗೆ ಹಾಕುವ ಬ್ಯಾಟರಿಯನ್ನು ತರುತ್ತಿದ್ದರು ಎಂದರೆ ಸುಳ್ಳು. ಆರೋಪಿ ಶಿವಕುಮಾರಿನ ದ್ವಿ ಚಕ್ರ ವಾಹನದಲ್ಲಿ ಮೂರು ಜನ ಸುದೀಪ ನ ದ್ವಿ ಚಕ್ರ ವಾಹನದಲ್ಲಿ ಇಬ್ಬರು ಹೋಗಿ ಮೊಲ ಬೇಟೆ ಯಾಡಿಕೊಂಡು ವಾಪಸ್ಸು ನಮ್ಮ ಊರಿಗೆ ಹೋಗಿ ಅಡಿಗೆ ಮಾಡಿಸಿಕೊಂಡು ಊಟು ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಮೊಲದ ವಿಚಾರದಲ್ಲಿ ಚಲಪತಿ ಗೂ ಮತ್ತು ಸುದೀಪನಿಗೆ 3-4 ಸಾರಿ ಗಲಾಟೆ ಆಗಿತ್ತು , ಆಗ ಸುದೀಪ ಚಲಪತಿಗೆ ಹೊಡೆದಿದ್ದನು ನಾನು , ಶಿವಕುಮಾರ, ನಾಗೇಶ ಜಗಳ ಬಿಡಿಸಿದೇವು ಎಂದರೆ ಸರಿಯಲ್ಲ.

ದಿ.28.05.2022 ರಂದು ಮೊಲ ಬೇಟೆಯಾಡಲು ಮೂರು ಜನ ಆರೋಪಿತರು ನನ್ನನ್ನು ಕರೆದಿದ್ದು ನಾನು ಹುಷಾರಿಲ್ಲ ಎಂದು ಹೆಳಿದ್ದೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿತರು ದ್ವಿ ಚಕ್ರ ವಾಹನದಲ್ಲಿ ರಾತ್ರಿ 8-00 ಗಂಟೆಗೆ ಹೋಗಿದ್ದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತಿನ ನಂತರ ಮೃತ ಸುದೀಪ ನೂ ಕೂಡ ತನ್ನ ದ್ವಿ ಚಕ್ರ ವಾಹನದಲ್ಲಿ ಹೋದನು ಎಂದರೆ ಸರಿಯಲ್ಲ. ಮರು ದಿನ ಚಲಪತಿ , ಶಿವಕುಮಾರ್ ಮತ್ತು ನಾಗೇಶ ಮಾತ್ರ ವಾಪಸ್ಸು ಬಂದರು ಆದರೆ ಸುದೀಪ ವಾಪಸ್ಸು ಬರಲಿಲ್ಲ ಎನ್ನುವುದರ ಬಗ್ಗೆ ಅವರ ತಾಯಿ ಮಂಗಳಮ್ಮ ರವರು ಆರೋಪಿತರನ್ನು ಕೇಳಿದಾಗ ಅವರು ಸರಿಯಾಗಿ ಉತ್ತರ ಕೊಡದೇ ರಾತ್ರಿ ನಮ್ಮ ಜೊತೆಯಲ್ಲಿ ಬಂದು ಎಲ್ಲಿಗೆ ಹೋದ ಎಂದು ಗೊತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆಂದು ನನಗೆ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ.

ನಂತರ ಸುದೀಪನ ಚಿಕ್ಕಪ್ಪನಾದ ಪುಟ್ಟರಂಗಯ್ಯ ಚಾಸಾ-11 ರವರ ಮೊಬೈಲ್‌ನ ವಾಟ್ಸ್ ಅಫ್ ಗ್ರೂಫ್ ನಲ್ಲಿ ಕೊಡಿಗೇನಹಳ್ಳಿಯಲ್ಲಿ ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಮೃತ ವ್ಯಕ್ತಿಯ ಪೋಟೋವನ್ನು ಹಾಕಿದ್ದನ್ನು ನೋಡಿ ಆಗ ತುಮಕೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಮೃತಪಟ್ಟಿರುವ ವ್ಯಕ್ತಿ ಸುದೀಪನ ಶವವಾಗಿರುತ್ತದೆ ಎಂದು ಗುರುತಿಸಿ ಸುದೀಪನ ಸ್ವಯಂ ಅಪಘಾತಪಡಿಸಿಕೊಂಡು ಅಥವಾ ಯಾವುದೋ ವಾಹನ ಅಪಘಾತಪಡಿಸಿರಬಹುಂದು ಎಂದು ಚಾಸಾ-1 ರವರು ದೂರು ಕೊಟ್ಟ ಬಗ್ಗೆ ನನಗೆ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ನಂತರ ಸುದೀಪನ ಚಿಕ್ಕಪ್ಪ ಆರೋಪಿತರಿಗ ವಿಚಾರ ಮಾಡಿದರು ಅವರು ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ.

ದಿ.28.05.2022 ರಂದು ರಾತ್ರಿ 9-15 ಗಂಟೆಗೆ ಸುದೀಪ ಮತ್ತು ಚಲಪತಿ ರವರ ಮಧ್ಯೆ ಜಗಳ ಉಂಟಾಗಿ ಸುದೀಪನ ಅಲ್ಲಿಯೇ ಇದ್ದ ನಾಡ ಬಂದೂಕಿನಿಂದ ಚಲಪತಿಗೆ ಹೊಡೆಲು ಹೋದಾಗ ಅದನ್ನು ಚಲಪತಿ ಕಿತ್ತುಕೊಂಡು ಸುದೀಪನನ್ನು ಸಾಯಿಸುವ ಉದ್ದೇಶದಿಂದ ಎಡ ತಲೆ , ಎಡಕಿವಿ , ಕುತ್ತಿಗೆಗೆ ಬಲವಾಗಿ ಹೊಡೆದಿರುತ್ತಾನೆ ಇದರಿಂದ ಸುದೀಪ ಸತ್ತು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಈ ವಿಷಯವನ್ನು ಚಲಪತಿಯಿಂದ ಉಳಿದ ಆರೋಪಿಗಳ ತಿಳಿದುಕೊಂಡು ಕೊಲೆ ವಿಚಾರವನ್ನು ಮರೆ ಮಾಚಿ ಅಪಘಾತವನ್ನು ಬಿಂಬಿಸಲು ತೀರ್ಮಾನಿಸಿ ಮೃತ ದೇಹವನ್ನು ಮೂರು ಜನ ಸೇರಿ ರಸ್ತೆಯ ಮಧ್ಯೆ ದಲ್ಲಿ ಮತ್ತು ದ್ವಿ ಚಕ್ರ ವಾಹನಗಳ ಬಿಡಿ ಭಾಗಗಳನ್ನು ಹೊಡೆದು ಹಾಕಿ ರಸ್ತೆಯ ಪಕ್ಕ ಬಿಳಿಸಿ ಅಪಘಾತದಂತೆ ಬಿಂಬಿಸಿರುವ ವಿಚಾರ ತಿಳಿಯಿತು ಎಂದು ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸುದೀಪನ ಸಾವಿಗೆ ಆರೋಪಿತರೇ ಕಾರಣ ಎಂದು ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿರುವ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ಕ್ರಮವಾಗಿ ನಿಪಿ-14 ಮತ್ತು ನಿಪಿ-15 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**